ನೀರಿನ ಬಗ್ಗೆ ಸಾಕಷ್ಟು ನನ್ನ ಗಮನಕ್ಕೆ ತಂದಿದ್ದಾರೆ. ಜೊತೆಗೆ ಕೆಲವು ಭಾಗದಲ್ಲಿ lift irrigation ಬಗ್ಗೆಯೂ ಕೂಡ ನನ್ನ ಗಮನಕ್ಕೆ ತಂದಿದ್ದಾರೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು Krishna basin ಬಗ್ಗೆ, ಕಾವೇರಿ ಬೇಸಿನ್ ಬಗ್ಗೆ, ಎಲ್ಲಾ ಸ್ಟಡಿ ಮಾಡಿದಾಗ, ತಮಗೆಲ್ಲಾ ಗೊತ್ತಿರುವಂತೆ ಒಂದಲ್ಲಾ ಒಂದು ಟ್ರಿಬ್ಯೂನಲ್‌ನಲ್ಲಿ (ಎ) ಸ್ಕೀಮ್ ಬಗ್ಗೆ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಈ ಒಂದು ಪರಿಸ್ಥಿತಿ ಇರುವಂತಹ ಸಂದರ್ಭದಲ್ಲಿ ನಮಗೆಲ್ಲರಿಗೂ ಗೊತ್ತಿರುವಂತೆ ಆಗಸ್ಟ್ ತಿಂಗಳಿನಲ್ಲಿ ಆ ಟ್ರಿಬ್ಯೂನಲ್ ಹೆಚ್ಚು ಕಡಿಮೆ ತೀರ್ಮಾನಕ್ಕೆ ಬರುವುದಿದೆ. ಅದರ ಬಗ್ಗೆ ಒಂದು ಕಡೆ ಗಮನ ಹರಿಸಿಕೊಂಡು, ಅದು ಮುಗಿಯುತ್ತಿದ್ದಂತೆ, ನಮಗೆ (ಬಿ) ಸ್ಕೀಮ್‌ಗೆ ಹೋಗುವಂತಹ ಅವಕಾಶಗಳು ತುಂಬಾ ಜಾಸ್ತಿ ಇದೆ. ವಿಶೇಷವಾಗಿ ಕುಡಿಯುವ ನೀರಿನ ಬಗ್ಗೆ ಎಲ್ಲಾ ಭಾಗಗಳಲ್ಲಿಯೂ ಕೂಡ ಈ ಸಮಸ್ಯೆ ಇದೆ. ಜೊತೆಗೆ ನಮ್ಮ ಸ್ನೇಹಿತರು ಹೇಳಿದ ಹಾಗೆ ಪರಮಶಿವಯ್ಯನವರ ವರದಿಯನ್ನು ಕೂಡ ನಾನು ಇದರ ಬಗ್ಗೆ ಏನು ಮಾಡಬೇಕೆನ್ನುವುದರ ಬಗ್ಗೆ ಸ್ಟಡಿ ಮಾಡುತ್ತಿದ್ದೇನೆ. ಕುಡಿಯುವ ನೀರಿನ ಬಗ್ಗೆ ನಮಗೆ ಹಣಕಾಸಿನ ಸಮಸ್ಯೆ ಏನೂ ಇಲ್ಲ. ಸಮಸ್ಯೆ ಇರುವುದು ಈ ರೀತಿ ಸಣ್ಣ ಪುಟ್ಟ ಸಮಸ್ಯೆಗಳು ಇವೆ. ಕೆಲವು ಕಡೆ ಎಕ್ಸಸ್ ವಾಟರ್ ಇರುವ ಭಾಗದ ಸಮಸ್ಯೆ ಇದೆ. ಅದನ್ನೂ ಕೂಡ ಗಮನಿಸಿ, ವಿಶೇಷವಾಗಿ ಯಾವ ಯಾವ ಭಾಗದಲ್ಲಿ ನೀರಿನ ತೊಂದರೆಗಳಿವೆ ಎಂದು ಅನ್ನಿಸುತ್ತದೆ ಅಲ್ಲಿಗೆ ಸಂಬಂಧಪಟ್ಟ ಶಾಸಕರುಗಳ ಜೊತೆ ಕೂತು ಚರ್ಚೆ ಮಾಡಿ ಕುಡಿಯುವ ನೀರಿನ ಸಮಸ್ಯೆ ಪರಿಹಾರ ಮಾಡುವುದಕ್ಕೆ ಖಂಡಿತ ನಾನು ಗಮನ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಮೋಹನ್ ಕೃಷ್ಣ ಶೆಟ್ಟಿ, ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕೇಳುವವರೂ ಇಲ್ಲ, ಹೇಳುವವರೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಾನು ಆಥರೈಸ್ ತೆಗೆದುಕೊಂಡಿದ್ದೇನೆ ಉತ್ತರ ಹೇಳುತ್ತೇನೆ.

ಗ್ರಾಮ ಪಂಚಾಯಿತಿಗಳಿಗೆ ಪಡಿತರ ಚೀಟಿ ಹಂಚುವಿಕೆ

119(386) ಶ್ರೀ ಪಾಟೀಲ್ ಡಿ.ಆರ್. (ಗದಗ): ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಬಡ ಜನರಿಗೆ ಆಹಾರಧಾನ್ಯಗಳನ್ನು ಕಡಿಮೆ ದರದಲ್ಲಿ ಕೊಡುವ ವ್ಯವಸ್ಥೆಯನ್ನು ಇನ್ನಷ್ಟು ಪ್ರಾಮಾಣಿಕ ಹಾಗೂ ಪಾರದರ್ಶಕವಾಗಿ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು;

ಆ) ಅನೇಕ ಗ್ರಾಮ ಪಂಚಾಯ್ತಿಗಳಲ್ಲಿ ಪಡಿತರ ಹಂಚುವ ಜವಾಬ್ದಾರಿ ಹೊಂದಿರುವ ಸಂಘ ಸಂಸ್ಥೆಗಳ ವ್ಯಕ್ತಿಗಳು ಪಡಿತರವನ್ನು ತಿಂಗಳಾದ್ಯಂತ ಹಂಚದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಇದನ್ನು ತಿಂಗಳಾದ್ಯಂತ ಹಂಚುವಂತಾಗಲು ಸರಕಾರ ಕೈಗೊಳ್ಳಲಿರುವ ಕ್ರಮಗಳೇನು;

ಈ) ಸೀಮೆಎಣ್ಣೆಯನ್ನು ಸರಿಯಾದ ಮಾಪನದಲ್ಲಿ ಅಳತೆ ಮಾಡಿ ವಿತರಿಸಲು ಸರಕಾರ ಕೈಗೊಂಡಿರುವ ಕ್ರಮಗಳೇನು;

ಉ) ಕೆಲವು ಕಡೆ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ದರವನ್ನು ಬಡ ಕುಟುಂಬಗಳಿಂದ ವಸೂಲಿ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಊ) ಇದನ್ನು ನಿಲ್ಲಿಸಲು ತೆಗೆದುಕೊಳ್ಳುವ ಕ್ರಮಗಳಾವುವು;

ಋ) ಪಡಿತರ ವಿತರಣೆಯನ್ನು ನಿಯಮಾನುಸಾರ ಮಾಡದ ಪರವಾನಗಿದಾರರ ಲೈಸನ್ಸ್‌ನ್ನು ರದ್ದುಪಡಿಸಿ, ಗ್ರಾಮಪಂಚಾಯಿತಿಗೆ ಪಡಿತರ ಹಂಚುವ ಜವಾಬ್ದಾರಿಯನ್ನು ವಹಿಸಲು ಸರಕಾರ ಸೂಕ್ತ ಬದಲಾವಣೆ ತರುವುದೇ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು)

ಅ) ಈಗಾಗಲೇ ಪಾರದರ್ಶಕ ರೀತಿಯಲ್ಲಿ ಸಮೀಕ್ಷೆ ನಡೆಸಲಾಗಿದ್ದು ಸಮೀಕ್ಷೆಯ ಮಾಹಿತಿ ಆಧಾರ ಪ್ರತಿ ಕುಟುಂಬದ ಸದಸ್ಯರುಗಳ ಛಾಯಚಿತ್ರ ಮತ್ತು ಹೆಬ್ಬೆಟ್ಟಿನ ಗುರುತು ಒಳಗೊಂಡ ಗಣಕೀಕೃತ ಪಡಿತರ ಚೀಟಿಗಳನ್ನು ನೀಡಿ ಕೂಪನ್‌ಗಳ ಮುಖಾಂತರ ಆಹಾರ ಧಾನ್ಯ ಪಡೆಯುವ ಪಾರದರ್ಶಕ ಹಾಗೂ ಸರಳೀಕೃತ ವ್ಯವಸ್ಥೆ ಅಳವಡಿಸಲು ಕಾರ್ಯೋನ್ಮುಖವಾಗಿದೆ.

ಆ) ಅಸಮರ್ಪಕ ಆಹಾರಧಾನ್ಯ ವಿತರಣೆಯಾಗುತ್ತಿರುವ ಬಗ್ಗೆ ವರದಿಗಳು ಇರುವುದಿಲ್ಲ. ಹೆಚ್ಚಿನ ದರವನ್ನು ವಸೂಲು ಮಾಡುತ್ತಿರುವ ಬಗ್ಗೆ ಗಮನಿಸಲಾಗಿದ್ದು, ನ್ಯಾಯಬೆಲೆ ಅಂಗಡಿಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಪ್ರತಿ ಗ್ರಾಮ ಪಂಚಾಯ್ತಿಯಲ್ಲಿ ಸದಸ್ಯರನೊಳಗೊಂಡಂತೆ ಆಹಾರ ಖಾತ್ರಿ ಸಮಿತಿ ರಚಿಸಲಾಗಿದ್ದು ಈ ಸಮಿತಿಯು ತಿಂಗಳಾದ್ಯಂತ ಆಹಾರಧಾನ್ಯಗಳ ಹಂಚಿಕೆ ಮಾಡಿಸುವ ಜವಾಬ್ದಾರಿ ಹೊಂದಿರುತ್ತದೆ. ಹಾಗೂ ಪ್ರತಿ ನ್ಯಾಯಬೆಲೆ ಅಂಗಡಿ ವ್ಯಾಪ್ತಿಗೆ ಜಾಗೃತಿ ಸಮಿತಿ ರಚಿಸಲಾಗಿದ್ದು ಈ ಸಮಿತಿಯು ಸಹ ಹಂಚಿಕೆಯ ಉಸ್ತುವಾರಿ ನೋಡಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ.

ಈ) ರಾಜ್ಯದಲ್ಲಿ ಜಾಲ್ತಿಯಲ್ಲಿರುವ ಅಳತೆ ಮತ್ತು ಮಾಪನ ಕಾನೂನಿನ ಅನುಸಾರ ಹಂಚಿಕೆ ಕ್ರಮ ಕೈಗೊಳ್ಳುವಂತೆ ಸೂಕ್ತ ನಿರ್ದೇಶನ ನೀಡಲಾಗಿರುತ್ತದೆ. ಈ ನಿಟ್ಟಿನಲ್ಲಿ ಆಹಾರ ಇಲಾಖೆ ಮತ್ತು ಅಳತೆ ಮತ್ತು ಮಾಪನ ಇಲಾಖೆಯ ಅಧಿಕಾರಿಗಳು ಉಸ್ತುವಾರಿಯನ್ನು ಮಾಡುತ್ತಿರುವರು.

ಉ) ಇಂತಹ ಪ್ರಕರಣಗಳು ಗಮನಿಸಲಾಗಿದ್ದು ಇದನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗಿರುತ್ತದೆ.

ಊ) ನಿಗಧಿತ ಅಧಿಕಾರಿಗಳು ಇದನ್ನು ನಿಯಂತ್ರಿಸಲು ಪರವಾನಿಗೆದಾರರಿಗೆ ದಂಡ ವಿಧಿಸಿದ್ದು ಹಾಗೂ ಪರವಾನಗಿಯನ್ನು ಸಹ ರದ್ದುಪಡಿಸುವ ಕ್ರಮ ಕೈಗೊಂಡಿರುತ್ತಾರೆ.

ಋ) ಪಡಿತರ ವಿತರಣೆಯನ್ನು ನಿಯಮಾನುಸಾರ ಮಾಡದ ಪರವಾನಗಿದಾರರ ಲೈಸನ್ಸನ್ನು ರದ್ದುಪಡಿಸಿದ ಪಕ್ಷದಲ್ಲಿ ಹತ್ತಿರದ ಪರವಾನಗಿದಾರರಿಂದ ಹಂಚಿಕೆ ಮಾಡಲಾಗುತ್ತಿದೆ. ಗ್ರಾಮ ಪಂಚಾಯ್ತಿಯು ಸಂಪೂರ್ಣ ಹಂಚಿಕೆ ಮಾಡಿಸುವ ಜವಾಬ್ದಾರಿ ಹೊಂದಿರುವುದರಿಂದ ಇದೇ ಸಂಸ್ಥೆ ಹಂಚಿಕೆ ವಹಿಸಿಕೊಳ್ಳುವುದು ಸೂಕ್ತವೆನಿಸುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅವರು ಉತ್ತರ ಕೊಟ್ಟಿದ್ದಾರೆ. ಅದು ನನಗೆ ಸಮಾಧಾನ ಇಲ್ಲ. ರಾಜ್ಯದ ಬಡ ಜನರಿಗೆ ಆಹಾರಧಾನ್ಯಗಳನ್ನು ಕಡಿಮೆ ದರದಲ್ಲಿ ಕೊಡುವ ವ್ಯವಸ್ಥೆಯನ್ನು ಇನ್ನಷ್ಟು ಪ್ರಾಮಾಣಿಕ ಹಾಗೂ ಪಾರದರ್ಶಕವಾಗಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ಎಂದು ಪ್ರಶ್ನೆ ಕೇಳಿದ್ದೇನೆ. ಈಗ ಪ್ರೈವೇಟ್ ಕಂಟ್ರಾಕ್ಟರ್ ಕಡೆಯಿಂದ ಆಹಾರಧಾನ್ಯಗಳು ಲಿಫ್ಟ್ ಆಗಿ ತಾಲ್ಲೂಕು ಕೇಂದ್ರಗಳಿಂದ ರೇಷನ್ ಶಾಪ್‌ಗೆ ಹೋಗುತ್ತವೆ. ನಾವು ನಮ್ಮ ಗದಗ್ ತಾಲ್ಲೂಕಿನಲ್ಲಿ ಫುಡ್ ಇನ್‌ಸ್ಪೆಕ್ಟರ್ಸ್ ಆ ವಾಹನಗಳ ಜೊತೆ ಹೋಗಬೇಕು, ಯಾವ ಗ್ರಾಮದಲ್ಲಿ ಇಳಿಸುತ್ತಾರೆ ಅಲ್ಲಿ ಆಹಾರ ಖಾತರಿ ಸಮಿತಿ ಸದಸ್ಯರಿಗೆ ಅದನ್ನು ತೋರಿಸಿ ಒಂದು ಫೋಟೋ ತೆಗೆಯಬೇಕೆಂದು ಹೇಳಿದ್ದೆವು. ಫೋಟೋಗಿಂತ ವೀಡಿಯೋ ಮಾಡಿದರೆ ಬಹಳ ಉತ್ತಮ. ಇಡೀ ತಾಲ್ಲೂಕಿನಲ್ಲಿ ಓಡಾಡುವ ಎರಡೋ ಮೂರೋ ವೆಹಿಕಲ್‌ಗಳು ಇರುತ್ತವೆ. ನಿಮ್ಮ ಫುಡ್ ಇನ್‌ಸ್ಪೆಕ್ಟರ್ ಅಥವಾ ಯಾರಾದರೂ ರೆವಿನ್ಯೂ ಅಧಿಕಾರಿಗಳು ಅದರ ಜೊತೆಗೆ ಹೋಗುವ ಹಾಗೆ ಮಾಡಬೇಕು. ಈ ವ್ಯವಸ್ಥೆ ಮಾಡಿದರೆ ಮಾಲು ಹಳ್ಳಿಗೆ ಹೋಗಿ ಬಿತ್ತು ಎಂದರೆ, ಮುಂದೆ ಮತ್ತೆ ಸಿಟಿಗೆ ಬ್ಲಾಕ್ ಮಾರ್ಕೆಟ್ಟಿಗೆ ಬರುವುದಕ್ಕೆ ಸ್ವಲ್ಪ ತೊಂದರೆಯಾಗುತ್ತದೆ. ಜನ ಕಾಯುತ್ತಾರೆ. ಈಗ ಅದು ಹಳ್ಳಿಗೆ ಹೋಗುವುದಿಲ್ಲ. ತಾಲ್ಲೂಕು ಮಟ್ಟದಲ್ಲಿ ಅಡ್ಡಸ್ಟ್ ಆಗಿ ಮಾರ್ಕೆಟ್‌ಗೆ ಹೋಗುವಂತಹ ವ್ಯವಸ್ಥೆ ಇದೆ. ಇದನ್ನು ನೀವು ಬ್ರೇಕ್ ಮಾಡಬೇಕು. ಬ್ರೇಕ್ ಮಾಡಿ ಈ ನಮೂನೆ ನೀವು ಮಾಡಿದರೆ ಅನುಕೂಲವಾಗುತ್ತದೆ. ಪ್ರತಿ ನಿತ್ಯ ಮಾರಾಟ ಮಾಡುವ ಹಾಗಾಗಬೇಕು. ನಿತ್ಯ ಮಾರಾಟ ಮಾಡುವುದಿಲ್ಲ. ಒಂದು ಮೂರು-ನಾಲ್ಕು ದಿವಸ ಮಾರಾಟ ಮಾಡುತ್ತಾರೆ. ಕೈ ಬಿಟ್ಟು ಬಿಡುತ್ತಾರೆ, ಹಾಗಾಗಬಾರದು. ನಿತ್ಯ ಮಾರಾಟವಾಗಬೇಕು They are obliged to sell on all days. ಅದು ಆಗುವಂತೆ ಮಾಡಿ. ಫೂಡ್‌ಗ್ರೇನ್ ಹೋಲ್‌ಸೇಲ್ ಪಾಯಿಂಟ್‌ನಿಂದ ರೀಟೇಲ್ ಪಾಯಿಂಟ್‌ಗೆ ಏನು ಹೋಗುತ್ತದೆ ಅದು ರಾತ್ರಿ ಹೊತ್ತು ಹೋಗಲಾರದ ಹಾಗೆ ಮಾಡಿ. ಅದು ಹಗಲು ಹೊತ್ತು ಜನರಿಗೆ ಗೊತ್ತಾಗುವ ಹಾಗೆ ಹೋಗಲಿ. ಈ ಮೂರು ನೀವು ಎನ್‌ಶ್ಯೂರ್ ಮಾಡಿದರೆ ಸಾಕಷ್ಟು ಸೋರಿ ಹೋಗುವುದು ನಿಲ್ಲಿಸಲಿಕ್ಕೆ ಸಾಧ್ಯವಾಗುತ್ತದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಹಾರ ಖಾತರಿ ಸಮಿತಿ ಏನು ಮಾಡಿದ್ದೀರಿ. ಅವರು ಹೆಚ್ಚು ಇದರಲ್ಲಿ ಕಾರ್ಯಗತವಾಗುವ ಹಾಗೆ ತಾವು ವ್ಯವಸ್ಥೆ ರೂಪಿಸಬೇಕು. ಇದರ ಜೊತೆಗೆ ಎಲ್ಲೆಲ್ಲಿ ಲಿಫ್ಟಿಂಗ್ ಸರಿ ಇಲ್ಲ ಅದನ್ನು ಆ ಶಾಪ್ ಲೈಸನ್ಸ್ ಕ್ಲೋಸ್ ಮಾಡಿ, ನೀವು ಅಲ್ಲಿಯ ಗ್ರಾಮ ಪಂಚಾಯಿತಿಯವರಿಗೆ ಅದನ್ನು

ಡಿಸ್ಟ್ರಿಬ್ಯೂಟ್ ಮಾಡುವಂತಹ ಜವಾಬ್ದಾರಿ ಕೊಟ್ಟರೆ ಬಹಳಷ್ಟು ಅನುಕೂಲವಾಗುತ್ತದೆ ಎಂದು ನನ್ನ ಅನುಭವದ ಮಾತು. ದಯವಿಟ್ಟು ಅದನ್ನು ಕನ್ಸೀಡರ್ ಮಾಡಬೇಕೆಂದು ನಾನು ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಇವತ್ತು ಏನು ಆಹಾರಧಾನ್ಯ ಸರಿಯಾಗಿ ಹೋಗುತ್ತಿಲ್ಲ. ಟ್ರಾನ್ಸ್‌ಪೋರ್ಟ್ ಕಾಂಟ್ರಾಕ್ಟರ್ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳು ಸೇರಿ ಅದನ್ನು ಅಲ್ಲಿಯೇ ಮುಗಿಸುತ್ತಾರೆ ಎನ್ನತಕ್ಕಂತಹ ಮಾತನ್ನು ಮಾನ್ಯ ಹಿರಿಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಈಗಾಗಲೇ ವಿಜಿಲೆನ್ಸ್ ಕಮಿಟಿ ಎಂದು ಮಾಡಿದ್ದೇವೆ. ಮತ್ತು ಗ್ರಾಮ ಮಟ್ಟದಲ್ಲಿ ಇಳಿಸಿದ್ದಕ್ಕೆ ಅವರು ಅಕ್‌ನಾಲೆಡ್ಜ್‌ಮೆಂಟ್ ತರಬೇಕೆಂದು ಹೇಳಿದ್ದೇವೆ. ಅಲ್ಲಿ ಅಕ್‌ನಾಲೆಡ್ಜ್‌ಮೆಂಟ್ ತರತಕ್ಕಂತಹ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ಆಗಿರಬಹುದು, ಛೇರ್ಮನ್ ಆಗಿರಬಹುದು, ಅಂಗನವಾಡಿಯವರು ಆಗಿರಬಹುದು, ಮತ್ತು ಊರಿನ ಪ್ರಮುಖರು ಅಂತಹವರು ಯಾರಾದರೂ ಮೂರು ಜನ ಸೈನ್ ಮಾಡಬೇಕೆಂದು ನಾನು ಈಗಾಗಲೇ ಹೇಳಿದ್ದೇನೆ. ಮತ್ತು ಏನು ತಾವು ಫುಡ್ ಇನ್‌ಸ್ಪೆಕ್ಟರ್ ವೆಹಿಕಲ್ ಜೊತೆ ಹೋಗಬೇಕೆಂದು, ಹೋಗಿ ಅವರೇ ಸ್ವತಃ ಡೆಲಿವರಿ ಕೊಡಬೇಕೆಂದು ಹೇಳಿದ್ದೀರಿ, ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ. ಏಕೆಂದರೆ, ಇಡೀ ತಾಲ್ಲೂಕಿಗೆ ಒಬ್ಬರೇ ಫುಡ್ ಇನ್‌ಸ್ಪೆಕ್ಟರ್ ಇರುವುದರಿಂದ, ಒಬ್ಬರು ಅಥವಾ ಇಬ್ಬರು ಇರುತ್ತಾರೆ. ಇಬ್ಬರೂ ಎಲ್ಲಾ ಅಂಗಡಿಗಳಿಗೆ ಒಂದೇ ಸಮಯದಲ್ಲಿ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ. ಯಾರು ಅಂಗಡಿಗಳವರು ಸರಿಯಾಗಿ ಲಿಫ್ಟ್ ಮಾಡುವುದಿಲ್ಲ ಅಂತಹವರ ಅಂಗಡಿಗಳನ್ನು ರದ್ದು ಮಾಡಿ ಗ್ರಾಮ ಪಂಚಾಯಿತಿಗೆ ಕೊಡಬೇಕೆಂದು ಸಲಹೆ ಮಾಡಿದ್ದಾರೆ. ಈಗಾಗಲೇ ಸರ್ಕಾರ ಸುತ್ತೋಲೆ ಹೊರಡಿಸಿದೆ, ತೀರ್ಮಾನ ತೆಗೆದುಕೊಂಡಿದೆ, ಗ್ರಾಮ ಪಂಚಾಯಿತಿಗಳಿಗೆ ಕೊಡುವುದರ ಬದಲಾಗಿ, ಸ್ತ್ರೀಶಕ್ತಿ ಗುಂಪುಗಳಿಗೆ, ಮಹಿಳಾ ಮಂಡಳಗಳಿಗೆ, ಯುವಕ ಮಂಡಳಗಳಿಗೆ ಮತ್ತು ಸಹಕಾರಿ ಕ್ಷೇತ್ರದಲ್ಲಿರತಕ್ಕಂತಹ ಸಂಘ ಸಂಸ್ಥೆಗಳಿಗೆ ಕೊಡಲಿಕ್ಕೆ ನಾವು ತೀರ್ಮಾನ ಮಾಡಿದ್ದೇವೆ. ಆ ನಿಟ್ಟಿನಲ್ಲಿ ಸೂಚನೆಯನ್ನು ಕೂಡ ಕೊಟ್ಟಿದ್ದೇವೆ. ಮುಂಬರುವ ದಿನಗಳಲ್ಲಿ ಆ ನಿಟ್ಟಿನಲ್ಲಿ ಹೆಚ್ಚು ಒತ್ತು ಕೊಟ್ಟು, ಸ್ತ್ರೀಶಕ್ತಿ ಗುಂಪುಗಳಿಗೆ, ಸಹಕಾರ ಸಂಘಗಳಿಗೆ, ಸಹಕಾರಿ ಕ್ಷೇತ್ರದಲ್ಲಿ ಮಾಡತಕ್ಕಂತಹ ಸಂಸ್ಥೆಗಳಿಗೆ, ಕೊಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ನಮ್ಮ ಉತ್ತರ ನಾನು ಕೇಳಿದೆ, ಅದಕ್ಕಿಂತ ವಿಭಿನ್ನವಾದಂತಹ ಇನ್ನೊಂದು ಸ್ವಲ್ಪ ಸಮಸ್ಯೆ ಇದೆ. ಹಳ್ಳಿಗಳಲ್ಲಿ ಏನಾಗುತ್ತದೆ, ಖಾಸಗಿಯವರಿಗೆ ಕೆಲವರಿಗೆ ಪರ್ಮಿಟ್ ಕೊಟ್ಟಿರುತ್ತಾರೆ ಫೇರ್ ಪ್ರೈಸ್ ಶಾಪ್ಸ್ ನಡೆಸುವುದಕ್ಕೆ, ಅವರು ರಾಜಕೀಯವಾಗಿ ಐಡೆಂಟಿಫೈ ಮಾಡಿಕೊಂಡು ಬಿಡುತ್ತಾರೆ.

ನನ್ನ ಜೊತೆಗೆ ಅಥವಾ ಇನ್ನೊಬ್ಬರ ಜೊತೆಗೆ ರಾಜಕೀಯವಾಗಿ ಐಡೆಂಟಿಫೈ ಮಾಡಿಕೊಂಡು ಅದಕ್ಕೆ ಪಾರ್ಟಿ ಬಣ್ಣ ಕೊಟ್ಟು ಅವರ ಎಲ್ಲಾ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಮ್ಮಲ್ಲಿ ಬೇಕಾದರೆ ಶ್ರೀನಿವಾಸಪುರ ತಾಲ್ಲೂಕಿನದೇ ನೀವು ಪ್ರತ್ಯೇಕವಾಗಿ ಫೈಲ್ಸ್ ತರಿಸಿ ನೋಡಿ. ಆರೇಳು ಕೇಸಸ್ ಹಗಲು ಹೊತ್ತಿನಲ್ಲೇ, ಟೌನ್‌ನಲ್ಲೇ ಶ್ರೀನಿವಾಸಪುರ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿಯೇ ಮಾರಿಕೊಂಡು ಹೋಗಿ ಸಿಕ್ಕಿರುವಂಥದ್ದು. ಯಾರಿಗೆಲ್ಲಾ ಆಫೀಸರ್ಸ್ ಮೇಲೆ ಕ್ರಮ ಜರುಗಿಸಿ ಅವರಿಗೆಲ್ಲಾ ವಜಾ ಮಾಡಿದ್ದೆವು, ಇವರು ಲಾಯಕ್ ಇಲ್ಲಾ ಈ ಕೆಲಸ ಮಾಡುವುದಕ್ಕೆ ಎಂದು, ಅವರೆಲ್ಲಾ ಆಮೇಲೆ ಬಂದು ಏನು ಹೇಳಿಕೊಂಡರೋ, ಏನೇನು ಮಾಡಿದರೋ ಗೊತ್ತಿಲ್ಲ. ಕಮೀಷನರ್‌ರವರು ನಿಮ್ಮ ಆಫೀಸರ್‌ನ್ನು ಬಲಿಪಶು ಮಾಡಿದ್ದಾರೆ. ತಾವು ಹಾಕಿಕೊಳ್ಳಲಿಲ್ಲ. ಮಂತ್ರಿಗಳು ತಮ್ಮ ಹತ್ತಿರ ತೆಗೆದುಕೊಂಡು ಅವರಿಗೆ ಟ್ರಾನ್ಸ್‌ಫರ್ ಮಾಡಿದಿರಿ. ಕಮಿಷನರ್ ಹತ್ತಿರ ಒಂದು ಆದೇಶ ಇದೆ. ಡೆಪ್ಯುಟಿ ಕಮಿಷನರ್ ಆದೇಶವನ್ನು ನಾನು ಸಸ್ಪೆಂಡ್ ಮಾಡಿದ್ದೇನೆ. ಪುನರ್ ವಿಮರ್ಶೆಗೆ ನಿಮಗೆ ಕಳುಹಿಸಿದ್ದೇವೆ ಎಂದು. ಡೆಪ್ಯುಟಿ ಕಮಿಷನರ್‌ಗೆ ಮೌಖಿಕ ಆದೇಶ ನೀಡಿ ಅವರಿಗೇ ಕೊಡುವುದು ಎಂದು ಹೇಳುವುದು: ಫೇರ್ ಪ್ರೈಸ್ ಶಾಪ್‌ಗಳಲ್ಲಿ ಬಡವರಿಗೆ ಕೊಡತಕ್ಕಂತಹ ಆಹಾರಧಾನ್ಯಗಳನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುವವನನ್ನು ಇಟ್ಟುಕೊಂಡು ಪಾರ್ಟಿ ಕಟ್ಟಬೇಕೆಂದರೆ, ನಾನಾಗಲೀ ನೀವಾಗಲೀ ಪಾರ್ಟಿ ಕಟ್ಟುವುದಕ್ಕಾಗುತ್ತಾ? ಅಂತಹ ಅವಿವೇಕಿಗಳನ್ನು ಇಟ್ಟುಕೊಂಡು ಒಂದು ವೇಳೆ ಅವರ ಪರ ವಕಾಲತ್ತು ವಹಿಸಿಕೊಂಡು ಬಂದರೆ, ನಾನು ಉದ್ಧಾರವಾಗುತ್ತೇನಾ? ನೀವು ಯಾವುದೂ ಮಾಡಬೇಡಿ. ಶ್ರೀನಿವಾಸಪುರ ತಾಲ್ಲೂಕು ಒಂದೇ ಒಂದು 8–10 ಕೇಸ್ ತರಿಸಿ ನೋಡಿ, ಎವಿಡೆನ್ಸ್ ಏನು ಇದೆ ನೋಡಿ, ಡೆಪ್ಯುಟಿ ಕಮಿಷನರ್ ಏಕೆ ಸಸ್ಪೆಂಡ್ ಮಾಡಿದ್ದರು ಎಂದು ನೋಡಿ, ಆ ಮೇಲೆ ಅಪೀಲ್ ಎಲ್ಲಿ ಬಂದಿದೆ ನೋಡಿ, ಏನೇನಾಗಿದೆ ಎಂದು ನೋಡಿಕೊಳ್ಳಿ. ಅದಾದ ಮೇಲೆ ಈಗ ನೀವು ಏನು ಸರ್ಕಾರದ ನಿಲುವನ್ನು ಪ್ರಕಟ ಮಾಡುತ್ತಿದ್ದೀರಿ ಈ ನಿಲುವಿಗೂ ನಿಮ್ಮ ಆಚರಣೆಗೂ ಹೊಂದಾಣಿಕೆ ಆಗುತ್ತಾ ಎಂದು ನೀವೇ ಇನ್ನೊಂದು ಸಲ ಅನ್ವೇಷಿಸಿ. ಏಕೆಂದರೆ, ನಾವು ಹೇಳುವುದೇ ಒಂದು, ನಡೆಯುವುದೇ ಒಂದಾಗುತ್ತದೆ. ಅವರು ಏನು ಮಾಡುತ್ತಾರೆ ಗೊತ್ತಾ, ಅವನಿಗೆ ಪುನಃ ಆರ್ಡರ್ ಬಂದ ಮೇಲೆ ಮೀಸೆ ತಿರುವಿಕೊಂಡು ಬಂದು ಮತ್ತೆ ಬಸ್ ಸ್ಟ್ಯಾಂಡ್‌ನಲ್ಲಿಯೇ ಮಾರಾಟ ಮಾಡುತ್ತಾನೆ. ನಾವು ಯಾರು ಏನು ಮಾಡಿದ್ದು ಎಂದು ಹೇಳುತ್ತಾನೆ. ನಾವು ಆಕಸ್ಮಾತ್ ಅವತ್ತು ಟೌನ್‌ನಲ್ಲಿದ್ದರೆ ಆ ಕಡೆ ಹೋಗುವುದಿಲ್ಲ ಇನ್ನೊಂದು ಕಡೆ ಹೋಗುತ್ತೇವೆ. ಇವನ ಮುಖ ನೋಡಬೇಕಲ್ಲಾ ಎಂದು. These things should not happen.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ತಮಗೆ ಒಂದು ಸಲಹೆ ಕೊಟ್ಟೆ. ಗ್ರಾಮ ಪಂಚಾಯಿತಿ ಲೈಸನ್ಸ್ ಕೊಡಲಿಕ್ಕೆ ನೀವು ವಿಚಾರ ಮಾಡಿ ಎಂದು.

ನಾನು ಏಕೆ ಹೇಳಿದೆ ಎಂದರೆ, ನೀವು ಸ್ತ್ರೀಶಕ್ತಿ ಸಂಘ, ಕೋ–ಆಪರೇಟಿವ್ ಸೊಸೈಟಿಗಳಿಗೆ ಕೊಡುವುದಕ್ಕೆ ಬೇಡವೆಂದು ಹೇಳುವುದಿಲ್ಲ. ಕೊಡಿ. ಅವರಿಗೆ ಆರ್ಥಿಕ ಶಕ್ತಿ ಇರುವುದಿಲ್ಲ. ಈ ರೇಷನ್ ಲಿಫ್ಟ್ ಮಾಡಬೇಕಾದರೆ ಸುಮಾರು 50–60,000 ರೂಪಾಯಿ ಬೇಕಾಗುತ್ತದೆ. ಆ 50–60,000 ರೂಪಾಯಿ ಲಿಕ್ವಿಡಿಟಿ ಅವರ ಹತ್ತಿರ ಇರುವುದಿಲ್ಲ. ಪಂಚಾಯಿತಿ ಆದರೆ ನೀವು ವರ್ಷ ಅವರಿಗೆ ಐದು ಲಕ್ಷ ರೂಪಾಯಿ ಅನುದಾನ ಕೊಡುತ್ತೀರಿ. ರೊಟೇಟ್ ಆಗುತ್ತಿರುತ್ತದೆ. ಒಮ್ಮೆ ಅವರು ರಿವಾಲ್ವಿಂಗ್ ಫಂಡ್ ಕ್ರಿಯೇಟ್ ಮಾಡಿಕೊಂಡು ಬಿಟ್ಟರೆ they can ensure that. ಪಂಚಾಯಿತಿಯೊಳಗೆ ಏನೇ ತಪ್ಪಾದರೆ 108 ಮಂದಿ ಅದನ್ನು ಎತ್ತುತ್ತಾರೆ. ಗ್ರಾಮ ಸಭೆಯಲ್ಲಿ, ಅಲ್ಲಿ ಇಲ್ಲಿ, ಈ ವಿಷಯ ಎತ್ತಲಿಕ್ಕೆ ಫೋರಂ ಇವೆ. ಪ್ರೈವೇಟ್‌ನವರಿಂದ ತಪ್ಪಾದರೆ ಎಲ್ಲಿಯೂ ವಿಷಯ ಪ್ರಸ್ತಾಪಿಸುವುದಕ್ಕೆ ಅವಕಾಶ ಇಲ್ಲ. ಅದಕ್ಕೆ ದಯವಿಟ್ಟು don't exclude Grama Panchayat. ಎಲ್ಲಿ ಗ್ರಾಮ ಪಂಚಾಯಿತಿಯವರು ತಾವಾಗೇ ನಮ್ಮ ಊರಿನೊಳಗೆ ನಾವು ಹಂಚುತ್ತೇವೆಂದು ಮುಂದೆ ಬಂದರೆ, ಅವರಿಗಲ್ಲಿ ಅವಕಾಶ ಕೊಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ದಯಮಾಡಿ ಗ್ರಾಮ ಪಂಚಾಯಿತಿಯವರಿಗೆ ಕೊಡಬೇಡಿ. ಸ್ತ್ರೀಶಕ್ತಿಯವರಿಗೆ ಕೊಟ್ಟರೆ ಎಷ್ಟೋ ನಮ್ಮ ಮಾನ ಮರ್ಯಾದೆ ಉಳಿಯುತ್ತದೆ. ಗ್ರಾಮ ಪಂಚಾಯಿತಿಯವರ ಹತ್ತಿರ ನಾವು ಬೇಯುವುದಕ್ಕಾಗುವುದಿಲ್ಲ. ಯಾವುದೇ ಕಾರಣಕ್ಕೂ ಫಂಡನ್ನು ಗ್ರಾಮ ಪಂಚಾಯಿತಿಯವರಿಗೆ ಕೊಡಬೇಡಿ.

ಶ್ರೀ ಬಿ.ಸಿ. ಪಾಟೀಲ್ : ನಮ್ಮ ಕಡೆ ಎಲ್ಲಾ ಗ್ರಾಮಪಂಚಾಯಿತಿಗಳಿಗೆ ವಿದ್ಯುಚ್ಛಕ್ತಿ ಬಿಲ್ ಕಟ್ಟುವುದಕ್ಕೆ ದುಡ್ಡು ಇಲ್ಲ. ಇನ್ನು ಈ ನ್ಯಾಯ ಬೆಲೆ ಅಂಗಡಿಗಳು ಕೊಟ್ಟರೆ ಎಲ್ಲ ಸದಸ್ಯರುಗಳು ಹಂಚಿಕೊಳ್ಳುತ್ತಾರೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ಬಹಳ ಉಡಾಫೆ ಇದೆ. ಅವರಿಗೆ ಬುದ್ಧಿ ಹೇಳುವರಾರು? ಅವರು ಶಾಸಕರನ್ನು ನಾವು ಸೃಷ್ಟಿ ಮಾಡಿದ್ದೇವೆಂದು ತಿಳಿದುಕೊಂಡಿದ್ದಾರೆ. ನಮ್ಮ ಹಿಂದೆ ಯಾರೋ ಒಬ್ಬ ಲೀಡರ್‌ಶಿಪ್ ಇದೆ. ಎಂಎಲ್‌ಎ ಅಲ್ಲ ಯಾರು ದೇವರೂ ಹೇಳುವುದಕ್ಕಾಗುವುದಿಲ್ಲ ಪಂಚಾಯಿತಿಯವರಿಗೆ ಸ್ತ್ರೀಶಕ್ತಿಯವರು ಕೊಟ್ಟಿದ್ದ ದುಡ್ಡು ಇವತ್ತು ನೀವು ಸಹಕಾರ ಸಂಘದಲ್ಲಿ ನೋಡಿ, ಕೇಳಿ, ಯಾವುದೇ ಸ್ತ್ರೀಶಕ್ತಿ ಸಂಘದವರು ತೆಗೆದುಕೊಂಡ ಸಾಲವನ್ನು ಸರಿಯಾಗಿ ಮರುಪಾವತಿ ಮಾಡಿದ್ದಾರೆಂದು ಹೇಳುತ್ತಾರೆ. ಈ ಪುಣ್ಯಾತ್ಮರು ನಮ್ಮ ಕಡೆ ಹೀಗೆ ಇದೆ ನಿಮ್ಮ ಕಡೆ ಹೇಗಿದೆಯೋ ಗೊತ್ತಿಲ್ಲ. ಏಕೆಂದರೆ, ನಮ್ಮ ಕಡೆ ಬೆಂಗಳೂರು ಹತ್ತಿರ ಇರುವುದರಿಂದ ನಮಗಿಂತ ಮೊದಲೇ ಅವರು ಬಂದು ವಿಧಾನಸೌಧದ ಬಳಿ ಬಂದು ನಿಂತಿರುತ್ತಾರೆ. ಎಂಎಲ್‌ಎಗಳಿಗೆ ಗಲಾಟೆ ಮಾಡುವುದಕ್ಕೆ ತರ್ಲೆ ಮಾಡುವುದಕ್ಕೆ

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಪುಟ್ಟೇಗೌಡರೆ, ದಯವಿಟ್ಟು ನೀವು ನಮ್ಮ ಕಡೆ ಒಂದು ಟೂರ್ ಹಾಕಿ, ನಮ್ಮ ಕಡೆ ಹೇಗೆ ನಡೆದಿದೆ ಎಂದು ನಿಮಗೆ ತೋರಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಬಹಳ ಸರಿಯಾಗಿ ಕೊಟ್ಟಿದ್ದಾರೆ. ಈ ಉತ್ತರ ಸರಿಯಾಗಿದೆ. ನಾನು ಡಿ.ಆರ್. ಪಾಟೀಲರಿಗೆ ಹೇಳುವುದೇನೆಂದರೆ, ಮಾನ್ಯ ಸಚಿವರೆ ತಾವೇನು ಹೇಳಿದ್ದೀರಿ ಗ್ರಾಮ ಪಂಚಾಯತಿಯು ಸಂಪೂರ್ಣವಾಗಿ ಹಂಚಿಕೆ ಮಾಡುವ ಜವಾಬ್ದಾರಿಯನ್ನು ಹೊಂದಿರುವುದರಿಂದ ಇದೇ ಸಂಸ್ಥೆ ಹಂಚಿಕೆ ಮಾಡಿಕೊಳ್ಳುವುದು ಸೂಕ್ತವೆನಿಸುವುದಿಲ್ಲ. ಇದು ಸರಿ ಉತ್ತರ. ಅವರಿಗೆ ಹಂಚುವಂಥ ಜವಾಬ್ದಾರಿ ಇದೆ. ನೋಡುವವರು ಮಾಡಬಾರದು, ಮಾಡುವವರು ನೋಡಬಾರದು. ಇವರು ಹಂಚುವಂಥ ಜವಾಬ್ದಾರಿ ಇದ್ದಾಗ ಇವರು ಮತ್ತೊಬ್ಬರ ಕಡೆಯಿಂದ ಹಂಚಿಸಿ ನೋಡಬೇಕೇ ಹೊರತು ಅವರಿಗೆ ಕೊಡೋದು ಸರಿಯಲ್ಲ. ಮಾನ್ಯ ಸಚಿವರೆ, ನಿಮ್ಮ ಉತ್ತರ ಸರಿ ಇದೆ.

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ರಮೇಶ್‌ಕುಮಾರ್‌ರವರು ಶ್ರೀನಿವಾಸಪುರದ ಬಗ್ಗೆ ಸ್ಪೆಸಿಫಿಕ್ ಆಗಿ ಹೇಳಿದರು. ನಾನು ತರಿಸಿ ನೋಡುತ್ತೇನೆ. ಇವೊತ್ತೇನು ಫೇರ್ ಪ್ರೈಸ್ ಶಾಪ್‌ಗಳನ್ನು ಕೊಟ್ಟಿದ್ದೇವೆ ಅದನ್ನು ಯಾವುದೇ ಸರ್ಕಾರ ಇರಬಹುದು, ಯಾವುದೇ ಪಕ್ಷ ಇರಬಹುದು, ಎಲ್ಲಾರೂ ಮಾಡಿದ್ದು ಅದೇ ಕೆಲಸ. ಪಕ್ಷದ ಆಧಾರದ ಮೇಲೆ ಪಕ್ಷದ ಕಾರ್ಯಕರ್ತರಿಗೆ ಕೊಡುವಂಥ ಕೆಲಸವನ್ನು ಮಾಡಿದ್ದಾರೆ. ಇದರಲ್ಲಿ ಪಡಿತರ ವ್ಯವಸ್ಥೆಗಿಂತಲೂ ರಾಜಕಾರಣವೇ ಹೆಚ್ಚು ಇನ್‌ವಾಲ್ವ್‌ಮೆಂಟ್ ಆಗಿದೆ. ಅದಕ್ಕಾಗಿ ಮುಂಬರುವ ದಿನಗಳಲ್ಲಿ ಪಾರದರ್ಶಕವಾಗಿ ಮಾಡುವುದಕ್ಕೆ ಏನೇನು ವ್ಯವಸ್ಥೆಗಳು ಬೇಕೋ ಆ ವ್ಯವಸ್ಥೆಯನ್ನು ಮಾಡುವುದಕ್ಕೆ ಎಲ್ಲ ಹಿರಿಯ ಸದಸ್ಯರ ಮತ್ತು ಈ ಮನೆಯ ಸದಸ್ಯರ ಸಲಹೆಯನ್ನು ಪಡೆದು ಬದಲಾವಣೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಇನ್ನೊಂದು ವಿಚಾರ, ಹಿಂದೆ ಹಳೆಯ ಕಾರ್ಡ್‌ಗಳನ್ನು ತೆಗೆದುಬಿಟ್ಟು ಆಮೇಲೆ ಅಡ್‌ಹ್ಯಾಕ್ ಅರೇಂಜ್‌ಮೆಂಟ್, ಅದಕ್ಕೆ ಡೇಟ್‌ಗಳನ್ನು ಹಾಕುತ್ತಾ ಬಂದರು. ನಿಮ್ಮ ಹಿಂದೆ ಇದ್ದಂಥ ಮಂತ್ರಿಗಳು. ಈಗ ಅವರು ಮಂತ್ರಿಗಳಾಗಿ ಮುಂದುವರಿದಿಲ್ಲ. ಈಗ ಕಾರ್ಡ್ಸೇ ಇಲ್ಲ. ಡೇಟ್ಸ್‌ಗಳನ್ನು ಕೊಡುತ್ತಲೇ ಬಂದಿದ್ದಾರೆ. ಕಳೆದ 20 ತಿಂಗಳಿಂದ ಹಾಗೂ ಹೊಸ ಸರ್ಕಾರವಾದ ಮೇಲೆ ನಂತರ ನೀವು ಬಂದಿರಲ್ಲಾ, ಆಗ ಹಿಂದೆ ತೆಗೆದಂಥ ಕಾರ್ಡ್‌ಗಳನ್ನು ಏನು ತೆಗೆದಿದ್ದಾರೆ ಅದಕ್ಕೆ ಇವೊತ್ತಿನವರೆಗೂ ಹೊಸ ಕಾರ್ಡ್‌ಗಳನ್ನು ಕೊಟ್ಟೇ ಇಲ್ಲ. ಇದರರ್ಥ ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವರಿಗೆ ಅವಕಾಶ.

ಶ್ರೀ ಗೋವಿಂದ ಎಂ. ಕಾರಜೋಳ್ : ಮಾನ್ಯ ಅಧ್ಯಕ್ಷರೆ, ಹೊಸ ಕಾರ್ಡ್‌ಗಳನ್ನು ಕೊಡುವುದಕ್ಕೆ ಈಗಾಗಲೇ ವ್ಯವಸ್ಥೆಯನ್ನು ಮಾಡಿದೆ. ಇದೇ ತಿಂಗಳು 19ನೆಯ ತಾರೀಖು ಮಾನ್ಯ ಮುಖ್ಯಮಂತ್ರಿಗಳು ದಿನಾಂಕವನ್ನು ನಿಗದಿ ಮಾಡುತ್ತೇನೆ ಎಂದು ಹೇಳಿದ್ದಾರೆ. ನಿಗದಿ ಮಾಡಿದರೆ 19 ರಿಂದಲೇ ಮಾಡುತ್ತೇವೆ. ಆಕಸ್ಮಾತ್ತಾಗಿ ಒಂದೆರಡು ದಿವಸ ಹೆಚ್ಚು

ಕಡಿಮೆ ಆಗಬಹುದು. ಆದರೆ ಕಾರ್ಡ್ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಟೆಂಪರರಿ ಕಾರ್ಡ್ 6 ತಿಂಗಳಿಗೆ ಕೊಡುತ್ತೇವೆ. ಗಣಕೀಕೃತ ಕಾರ್ಡ್‌ಗಳನ್ನು ಕೊಡುವುದಕ್ಕೆ ಆರು ತಿಂಗಳು ಸಮಯ ಕೇಳಿದ್ದೇವೆ. ಆ ವ್ಯವಸ್ಥೆಯನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಎಸ್.ಎಸ್. ಪಾಟೀಲರೆ, ತಮ್ಮ ಪ್ರಶ್ನೆಗೆ ಉತ್ತರ ಕೊಡಲು ಒಂದು ವಾರದ ಕಾಲಾವಕಾಶವನ್ನು ಕೋರಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ನಾನು ಓದುತ್ತೇನೆ. ದಯವಿಟ್ಟು ಕೇಳಿ. ಒಂದು ವಾರ ಟೈಂ ಕೇಳಿದ್ದಾರಲ್ಲಾ ಮಾನ್ಯ ಸಚಿವರು, ಬಹುಶಃ ಒಂದು ವಾರ ಕಾಲ ಕೇಳಿದ್ದೂ ಮುಗಿಯಿತು. ಆ ಅವಧಿ ಕೂಡ ಮುಗಿಯಿತು. ಏಕೆಂದರೆ 31ನೇ ತಾರೀಖು ಕೇಳಿದ್ದು, ಈಗ ಒಂದು ವಾರ ಆಯಿತು. ಈಗ ಅವರು ಉತ್ತರ ಹೇಳುತ್ತಾರೆ ಮಾನ್ಯ ಅಧ್ಯಕ್ಷರೆ, ಅಂತದ್ದೇನೂ ಇದರಲ್ಲಿ ಇಲ್ಲ. ತಮಗೆ ಹೇಳುತ್ತೇನೆ. ಮುಂಡರಗಿ ಮತದಾರ ಕ್ಷೇತ್ರದ ಗದಗ್ ತಾಲ್ಲೂಕಿನ ಕಣಿವೆ ಗ್ರಾಮಕ್ಕೆ ಕುಡಿಯುವ ನೀರಿನ ಟೆಂಡರ್‌ನ್ನು ಕರೆದಿದ್ದು ಟೆಂಡರ್ ಮೊತ್ತಕ್ಕಿಂತಲೂ ಹೆಚ್ಚಿಗೆ ನಮೂದಿಸಿ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಉತ್ತರ ಹೇಳುವುದಕ್ಕೆ ಪ್ರಶ್ನೆ ಏನು ಕಷ್ಟವಿದೆ. ಟೆಂಡರ್ ಮೊತ್ತಕ್ಕಿಂತಲೂ ಎಷ್ಟು ಹೆಚ್ಚು ಕೊಟ್ಟಿದ್ದೀರಿ. ಹಾಗಿದ್ದರೆ ಟೆಂಡರ್ ಕರೆದಿದ್ದರೂ ಸಹ ಕಾಮಗಾರಿ ಅಧಿಕಾರಿಗಳು ಗುತ್ತಿಗೆದಾರರು ಹೊಂದಾಣಿಕೆ ಮಾಡಿ ಹೆಚ್ಚಿನ ದರವನ್ನು ನೀಡಿರುವುದು ನಿಜವೇ? ಈ ಪ್ರಶ್ನೆಗಳನ್ನು ಕೇಳಿದ್ದೇನೆ. ಆಮೇಲೆ ಒಂದು ಟಪಾಲನ್ನು ಕೂಡ ಬರೆದಿದ್ದೇನೆ. ಹೀಗೆ ಮಾಡುತ್ತಿದ್ದಾರೆಂದು ಹೇಳಿದ್ದೇನೆ. ಇಲ್ಲೇನಾಗಿದೆಯೆಂದರೆ ಅಧ್ಯಕ್ಷರೆ, ಸದನದಲ್ಲಿ ಈಗ ಮಾನ್ಯ ಈಶ್ವರಪ್ಪನವರೂ ಇದ್ದಾರೆ, ಕೇಳಿ. ಈ ಟೆಂಡರ್ ಮಾಡುತ್ತಾರೆ, ಈ ಪಾರದರ್ಶಕ ಕಾಯಿದೆಯನ್ನು ಹೇಗೆ ಮುರಿಯಬೇಕು ಎಂದು ತೀರ್ಮಾನ ಮಾಡಿಕೊಂಡಿದ್ದಾರೆ ಅಧಿಕಾರಿಗಳೂ ಮತ್ತು ಅವರೂ ಕೂಡಿಕೊಂಡು, ಅವರು ಏನು ಮಾಡುತ್ತಾರೆಂದರೆ, ಆ ಗುತ್ತಿಗೆದಾರರೆಲ್ಲರೂ ಕೂಡಿಕೊಂಡು ಹತ್ತು ಪರ್ಸೆಂಟೋ, ಹದಿನೈದು ಪರ್ಸೆಂಟೋ ಎಬೋವ್ ಹಾಕಿಸುವುದು, ಆ ಹೆಚ್ಚಿನ ಹಣ ಅವನಿಗೆ ಯಾವಾಗ ಕೊಡುತ್ತಾನಲ್ಲ ಅವಾಗ ಕೊಡುತ್ತಾರೆ. ಇವನು ಎಬೋವ್ ಹಾಕಿಬಿಡುತ್ತಾನೆ. ಎಬೋವ್ ಹಾಕಿಬಿಡುತ್ತಾನೆ. ಆದರೆ ಕೆಲಸ ಮಾಡುವುದು ಟೆಂಡರ್ ರೇಟ್‌ಗೇ. ಇದರಿಂದಲೇ ಮಾನ್ಯ ಈಶ್ವರಪ್ಪನವರು ಇದನ್ನು ಮೊದಲು ನಿಲ್ಲಿಸಿ. ಪೇಪರ್‌ನಲ್ಲಿ ನಿಮ್ಮಲ್ಲಿ ಆಗಿದ್ದು ಬಂದಿದೆ. ಇದನ್ನು ನಿಲ್ಲಿಸಿದರೆ ಒಂದೈನೂರರಿಂದ ಸಾವಿರ ಕೋಟಿ ಇದರಿಂದ ಉಳಿಸಬಹುದು.

ಅಧ್ಯಕ್ಷರು : ಮಾನ್ಯ ಪಾಟೀಲರೆ ನಾನು ಮಧ್ಯದಲ್ಲಿ ಹೇಳುತ್ತೇನೆ. ಅವರು ಹೇಗೆ ನಿಲ್ಲಿಸುತ್ತಾರೆ. ಇದರಲ್ಲಿ ಏನಪ್ಪಾ ಅಂದರೆ ಬಹಳ ಜನ ಪ್ರಮುಖರು, ಅದರಲ್ಲಿ ಶಾಸಕರು ಮಾಜಿ ಶಾಸಕರು ಅವರ ನೇತೃತ್ವದಲ್ಲಿಯೇ ಈ ರಿಂಗ್ ನಡೆಯುತ್ತದೆ. ಅಂಥ